-

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ ನಂಃ 62/2015

ಸಿಡಬ್ಲ್ಯೂಃ 6 ಪಿಡಬ್ಲ್ಯೂಃ 3

| | |
|---|---|
| ಹೆಸರುಃ | ಗೋಪಾಲ ಎಂ ಚೌಹಾಣ |
| ತಂದೆ/ಗಂಡನ ಹೆಸರುಃ | ಮಹಾಂತೇಶ |
| ವಯಸ್ಸುಃ | 39 ವರ್ಷ |
| ಉದ್ಯೋಗಃ | ಸಿ ಹೆಚ್ ಸಿ ಕದ್ರಾ ಪೋಲೀಸ ಠಾಣೆ |
| ವಾಸಃ | ಕದ್ರಾ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 23-08-2024 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ನಾನು 2009 ರಿಂದ 2015 ವರೆಗೆ ವಿಶೇಷ ಪೋಲೀಸ ಠಾಣೆ ಅ.ಲಾ.ನಿ ಕಾರವಾರ ಇಲ್ಲಿ ಪೋಲೀಸ ಪೇದೆ ಯಾ ಗಿ ಕ ರ್ತವ್ಯನಿರ್ವಹಿಸಿರುತ್ತೆನೆ .

ದಿಃ 19-10-2014 ರಂದು ನಮ್ಮ ಮೇಲಾಧಿಕಾರಿಗಳಾದ ಚಾಸಾ-1 ರವರೊಂದಿಗೆ ನಾನು ಹಾಗೂ ಚಾಸಾ-4, 5 7 ಮತ್ತು 8 ರವರೊಂದಿಗೆ ಕಾರವಾರ ಶಹರ ವ್ಯಾಪ್ತಿಯ ಬೈತಕೂಲ್ ಪರಿಸರದಲ್ಲಿ ಅಕ್ರಮ ಅಬಕಾರಿ ಮಾಹಿತಿ ಪತ್ತೆ ಕಾರ್ಯದಲ್ಲಿ ಇದ್ದಾಗ, ಸಂಜೆ 6-30 ಗೆ ಚಾಸಾ-1 ರವರಿಗೆ ಅಮದಳ್ಳಿ ಗ್ರಾಮದ ನಿವಾಸಿಯಾದ ದೀಪಕ ಬಾಬು ತಾಂಡೆಲ್ ಇತನು ಅಕ್ರಮವಾಗಿ ಗೋವಾ ರಾಜ್ಯದ ಮದ್ಯಗಳನ್ನು ಕಪ್ಪು ಬಣ್ಣದ ಪ್ರಯಾಣಿಕ ಬ್ಯಾಗ್ ನಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡಲು ರಾಷ್ಟ್ರೀಯ ಹೆದ್ದಾರಿ 66 ರ RFO ಕಚೇರಿಯ ತಿರುವಿನಲ್ಲಿ ನಿಂತಿರುತ್ತಾನೆ ಎಂದು ಖಚಿತ ಬಾತ್ಮಿ ಬಂದಿದ್ದು, ಅದರಂತೆ ಸಂಜೆ 6-35 ಗಂಟೆಗೆ ಕಾರವಾರ ಬಿಲ್ಟ ಸರ್ಕಲ್ ಬಳಿ ನಾವು ಬಂದು, ಅಲ್ಲಿಯೇ ಇದ್ದ ಇಬ್ಬರು ಪಂಚರಿಗೆ ಚಾಸಾ-1 ರವರು ದಾಳಿಯ ಬಗ್ಗೆ ಮಾಹಿತಿಯನ್ನು ನೀಡಿ ಪಂಚರಾಗಿ ಸಹಕರಿಸುವಂತೆ ಕೇಳಿದ್ದರಿಂದ ಅವರು ಅದಕ್ಕೆ ಒಪ್ಪಿದ್ದು, ನಂತರ ಅವರನ್ನು ಕರೆದುಕೊಂಡು, ಸಂಜೆ 6-45 ಗಂಟೆಗೆ ಬಿಲ್ಟ ಸರ್ಕಲ್ ನಿಂದ ಹೊರಟು ಸಂಜೆ 6-50 ಗೆ ಮಾಹಿತಿ ಬಂದ ಘಟನಾ ಸ್ಥಳಕ್ಕೆ ತಲುಪುತ್ತಿದ್ದಂತೆ ಅಲ್ಲಿ ಮಾಹಿತಿಯಂತೆ ಕಪ್ಪು ಬಣ್ಣದ ಬ್ಯಾಗ್ ಹಿಡಿದುಕೊಂಡಿದ್ದು, ದೂರದಲ್ಲಿನಮ್ಮ ಇಲಾಖಾ ವಾಹನ ಬರುತ್ತಿದ್ದನ್ನು ಗಮನಿಸಿ, ಪ್ರಯಾಣಿಕರ ಬ್ಯಾಗ್ ನ್ನು ಸ್ಥಳದಲ್ಲಿಯೇ ಬಿಟ್ಟು ಪಶ್ಚಿಮ ದಿಕ್ಕಿಗೆ ಇದ್ದ ಕಚ್ಚಾ ರಸ್ತೆಯಲ್ಲಿ ಓಡಿ ಹೋಗಿದ್ದು, ಆತನನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಿದ್ದರೂ ಆತನು ನಮ್ಮಿಂದ ತಪ್ಪಿಸಿಕೊಂಡಿರುತ್ತಾನೆ. ಆತನನ್ನು ನಮ್ಮ ಟಾರ್ಚ ಹಾಗೂ ಜೀಪಿ ಲೈಟ ನ ಮೂಲಕ ನೊಡಲಾಗಿ ಆತನು ಹಳೆಯ MOB ಆಗಿದ್ದು, ಆತನ ಹೆಸರು ದೀಪಕ್ ತಂದೆ ಬಾಬು ತಾಂಡೆಲ್ ಎಂದು ನಾವೆಲ್ಲರೂ ಆತನನುನ ಗುರುತಿರುತ್ತೆವೆ. ನಂತರ ಆತನು ಬಿಟ್ಟು ಹೊದ ಬ್ಯಾಗ್ ನ್ನು ಪರಿಶಿಲಿಸಲಾಗಿ

ಅದರಲ್ಲಿ ಗೊವಾ ರಾಜ್ಯದ ತಯಾರಿಕೆಯ for sale in Goa only ಎಂದು ನಮೂದಿಸಿದ್ದ ಅಕ್ರಮ ಮದ್ಯ ಕಂಡುಬಂದಿರುತ್ತದೆ ನಂತರ ಬ್ಯಾಗ್ ನ್ನು ಕುಲಂಕುಶವಾಗಿ ಪರಿಶೀಲಿಸಲಾಗಿ 750 ಎಂ ಎಲ್ ಅಳತೆಯ ಲೈಪ್ ಹೌಸ ಪ್ರಿಮಿಯಮ್ ವಿಸ್ಕಿಯ 37 ಬಾಟಲಿಗಳು ಕಂಡುಬಂದಿದ್ದು, ಅವುಗಳ ಪೈಕಿ ಒಂದು ಬಾಟಲಿಯನ್ನು ರಾಸಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು , ಬಿಳಿ ಬಟ್ಟೆಯಿಂದ ಸುತ್ತಿ, ಇಲಾಖಾ ಅರಗಿನ ಸೀಲು ಹಾಕಿ ಚಾಸಾ–1 ರವರ ಮತ್ತು ಪಂಚರ ಸಹಿ ಉಳ್ಳ ಚೀಟಿಯನ್ನು ಅಂಟಿಸಲಾಯಿತು. ನಂತರ ಸ್ಥಳದಲ್ಲಿ ರಾತ್ರಿ 7–10 ರಿಂದ 8–00 ವರೆಗೆ ಪಂಚನಾಮೆಯನ್ನು ತಯಾರಿಸಿ ಭಾವಚಿತ್ರ ತೆಗೆಸಿ ವಶಪಡಿಸಿಕೊಂಡ ಮುದ್ದೆಮಾಲುಗಳು ಹಾಗೂ ಪಂಚನಾಮೆಯನ್ನು ಚಾಸಾ–1 ರವರು ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಆರೋಪಿ ಹಾಗೂ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಜಿ ಪಿ ನ್ಯಾಯವಾದಿರವರಿಂದಃ**

ಘಟನಾ ಸ್ಥಳವು ಜನ ನಿಬಿಡ ಪ್ರದೇಶ ಹಾಗೂ ಸಾಕಷ್ಟು ವಾಹನ ಸಂಚರಿಸುವ ಸ್ಥಳ ಎಂದರೆ ಸರಿ. ಚಾಸಾ–2 ಮತ್ತು 3 ಪಂಚರು ಬಾಡ ಹಾಗೂ ವಾಗ್ಲೆವಾಡ ನಂದನಗದ್ದದವರು ಎಂದರೆ ಸರಿ.ಘಟನಾ ಸ್ಥಳದಿಂದ ಸದರಿ ಬಾಡ ಹಾಗೂ ನಂದನಗದ್ದ 6 ರಿಂದ 7 ಕಿ.ಮಿ ದೂರದಲ್ಲಿ ಇರುತ್ತದೆ. ಪಂಚರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಯಾವುದೇ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ, ಯಾವುದೇ ದಾಳಿ ಮಾಡಿರುವುದಿಲ್ಲ, ಪಂಚನಾಮೆ ತಯಾರಿಸಿರುವುದಿಲ್ಲ, ಆರೋಪಿತರಿಂದ ಯಾವುದೇ ಮುದ್ದೆಮಾಲುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿತನರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ವಾರಸುದಾರರು ಇಲ್ಲದೇ ಇರುವ ಮುಮಾಗಳನ್ನು ಬಳಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇರುವುದಿಲ್ಲ.**

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**C/c ಪ್ರ.ದ.ನ್ಯಾದಂ. ಕಾರವಾರ**